


ಸೀತಕ್ಕ ಇನ್ನು ಕೆಲವು ಕಾಲ ಕಾದಿರಬೇಕಾಯಿತು. ಮಗಳು ಬರುವದೂ ಮುಂದೆ ಹೋಯಿತು. ಬರುತ್ತೇನೆ ಎಂದು ಬರದೇ ಬೇಸರ ಬಂದುಬಿಟ್ಟಿತು. ಕಾದು ಕಾದು ಸಾಕಾಗಿ ಪುನಃ ಬಂದದ್ದು ಅವಳ ಪತ್ರವೇ. ಅವಳೇನೂ ಅಲ್ಲ. ಅವಳ ದಾರಿ ಕಾಯುತ್ತಿದ್ದಂತೆ ಮಾಳಪ್ಪ ಶ್ಯಾನುಭೋಗರ ದೆವ್ವ ಕೂಡ ಬಂದುಹೋಯಿತು. 'ಥೂ ಅವನ ಹೆಸರೇ ಬೇಡ ಇನ್ನು' ಎಂದು. 'ಅಷ್ಟರಲ್ಲಿ ನನ್ನ ಮಗಳಿಗೂ ಬೇರೆ ಕಡೆ ಬದಲಿಯಾಯಿತು. ಅದೂ ಹೊನ್ನಾವರದ ಒಂದು ಹಳ್ಳಿಗೆ. ಅದೇ ಅದೇ ಮೊದಲು ಶ್ಯಾನುಭೋಗರಿದ್ದ ಊರೋ ಏನೋ. ಇರಬೇಕು ಅದೇ. ಅವನ ಹೆಸರು ಎತ್ತಿದೊಡನೆ ಹುಂ. ಪುನಃ ನೆನಪಾಯಿತು. ಈಗ ಅವನು ಬದುಕಿದ್ದರೆ ನನ್ನ ಮಗಳಿಗೆ ತೊಂದರೆ ಇಲ್ಲದೇ ಸಂಬಂಧ ಕೂಡಿ ಬರುತ್ತಿತ್ತು. ನಮ್ಮ ಕೈಯಲ್ಲೇನಿದೆ? ಆಗುವದ್ಯಾವುದೂ ತಪ್ಪುವದಿಲ್ಲ. ಅವನು ಸತ್ತಿದ್ದೂ ಒಂದು ಸೋಜಿಗವಾಯಿತು. ಕಣ್ಣಿಗೇ ಕಾಣುತ್ತಾನೆ. ಅಂದು ಬಂದಿದ್ದನಲ್ಲ ನಮ್ಮ ಮನೆಯ ಬಾಗಿಲತನಕ– ಅದೇ ಮೂರ್ತಿ! ಹಾಗೇ ಥೇಟು ಅವನೇ! ಹೆದರಿಕೆ ಹಾಳಾದದ್ದು. ಬಾಗಿಲು ತೆರೆಯುವ ತನಕ ಮುಚ್ಚಿಕೊಂಡುಬಿಟ್ಟ. ಆ ದಿನ ಯಾಕೋ ಅವನ ನೆನಪು ಕೂಡ ಬಹಳವಾಗಿತ್ತು. ಒಂದು ಕಡೆ ಮಗಳು ಬರುವಳಲ್ಲ ಎಂಬ ತವಕದಲ್ಲಿದ್ದೆ. ಬರಬೇಕಾಗಿತ್ತು. ಏಕೆ ಬರಲಿಲ್ಲ. ಎಂಬ ಕಳವಳವೂ ಇತ್ತು. ಅದೇ ಹೊತ್ತಿಗೆ ಶ್ಯಾನುಭೋಗ ಈಗ ಬದುಕಿರಬೇಕಾಗಿತ್ತು ಎಂದೂ ಅನಿಸುತ್ತಿತ್ತು. ಮಗಳು ಬರಬೇಕಾಗಿತ್ತು. ಶ್ಯಾನುಭೋಗ ಸಾಯಬಾರದಾಗಿತ್ತು– ಇವೆರಡೇ ನನ್ನ ವಿಚಾರಗಳು ಅಂದು. ಹೌದು, ಹೀಗೆ ಮನಸ್ಸಿನಲ್ಲಿ ಏನೇನೆಲ್ಲ ಹೊಳೆಯುತ್ತಿದ್ದಾಗಲೇ ಅದು ಹೊರಗೆ ಬಾಗಿಲು ಬಡಿದು ಕರೆದ ಹಾಗಾಗಿತ್ತು. ಬಾಗಿಲು ಬಡಿದಿತ್ತಲ್ಲವೇ ಊಂ, ಸರಿಯಾಗಿ ಈಗ ಹೊಳೆಯುವದೇ ಇಲ್ಲ. ನೆನಪಿಲ್ಲ. ಆದರೆ ಹೋಗಿ ಬಾಗಿಲು ತೆಗೆದದ್ದು. ಗೊತ್ತು ಅಷ್ಟೇ! ನೋಡಿದ್ದು ಇಲ್ಲ– ಅದೂ ನೆನಪಿಲ್ಲ. ಈ ಹಾಳು ತಲೆಯಲ್ಲಿ ನೋಡಿದ ಹಾಗಿದೆ. ಥೂ ನನ್ನ ಹೆದರಿಕೆ